ಅ) ಈ ಬಾಕಿ ಉಳಿದ ಪ್ರಕರಣಗಳು ತೀರ್ಮಾನವಾಗಲು ಇನ್ನು ಎಷ್ಟು ಕಾಲ ಬೇಕಾಗುವುದು; ಈ ರೀತಿ ಬಾಕಿ ಉಳಿಯಲು ಇರುವ ಕಾರಣಗಳಾದರೂ ಏನು;

ಇ) ಬಾಕಿ ಉಳಿದ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳ ಸಂಖ್ಯೆ

1255. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇಂದಿನವರೆಗೂ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು;

ಆ) ಇವುಗಳಲ್ಲಿ 3 ವರ್ಷಗಳಿಗಿಂತ ಹಿಂದಿನ ಮೊಕದ್ದಮೆಗಳೆಷ್ಟು;

ಇ) ಈ ಮೊಕದ್ದಮೆಗಳನ್ನು ಶೀಘ್ರ ವಿಲೇವಾರಿ ಮಾಡಲು ಸರಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ;

ಈ) ಹಾಗಿದ್ದರೆ. ಅದರ ವಿವರಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ.

ವಿದ್ಯಾ ಸಂಸ್ಥೆಗಳಿಗೆ ವೃತ್ತಿ ತೆರಿಗೆ ಹಾಕುವುದನ್ನು ನಿಲ್ಲಿಸುವ ಬಗ್ಗೆ

1735. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾ ಸಂಸ್ಥೆಗಳಿಗೆ ರೂ. 2500-00ಗಳ ವೃತ್ತಿ ತೆರಿಗೆ ವಿಧಿಸುತ್ತಿರುವುದನ್ನು ಸರ್ಕಾರ ನಿಲ್ಲಿಸುವುದೆ;

ಆ) ಹಾಗಿದ್ದರೆ, ಎಂದಿನಿಂದ ನಿಲ್ಲಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1992-93ರ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ ಕನ್ನಡ ಮಾಧ್ಯಮ ಶಾಲೆಗಳಿಗೆ, ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಜಾತಿ ಅಥವಾ ಹಿಂದುಳಿದ ಪಂಗಡವ ಮಾಲೀಕರುಗಳು ನಡೆಸುವ ಶಾಲೆಗಳಿಗೆ 1-4-1992 ರಿಂದ ವೃತ್ತಿ ತೆರಿಗೆಯಿಂದ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.